**ದಿನಾಂಕಃ 29-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀಮತಿ ಆರ್.ಎನ್.ಬಿ., ವಕೀಲರಿಂದ**

**(ಸಾಕ್ಷಿ ತೆಲುಗು ಭಾಷಿಕರಾಗಿದ್ದು ತನಗೆ ತೆಲುಗು ಭಾಷೆಯನ್ನು ಹೊರತುಪಡಿಸಿ ಬೇರೆ ಯಾವುದೇ ಭಾಷೆ ಬರುವುದಿಲ್ಲ ಎಂದು ನುಡಿದ ಕಾರಣ ಸಾಕ್ಷಿ ತನ್ನ ವಿಚಾರಣೆಯನ್ನು ನೀಡಿದ್ದು ನ್ಯಾಯಾಲಯವೇ ಅದನ್ನು ತರ್ಜುಮೆ ಮಾಡಿ ಸಾಕ್ಷಿ ನೀಡಿದ ವಿಚಾರಣೆಯನ್ನು ನೊಂದಾಯಿಸಿಕೊಳ್ಳಲಾಯಿತು)**

ನಾನು ಈ ದಾವೆಯನ್ನು ಚೆನ್ನಪ್ಪ, ಶಿವ, ವೆಂಕಟೇಶ ಹಾಗೂ ರಾಮು ರವರ ಮೇಲೆ ಹೂಡಿರುತ್ತೇನೆ. ನನ್ನ ನಿವೇಶನ ಸಂಖ್ಯೆ 130 ಆಗಿರುತ್ತದೆ. ಈ ದಾವೆಯನ್ನು ನಾನು ದಾರಿಗಾಗಿ ಹೂಡಿರುತ್ತೇನೆ. ಸದರಿ ನಿವೇಶನವನ್ನು ನಾನು ಲಕ್ಷ್ಮಕ್ಕ ರವರಿಂದ ಖರೀದಿಸಿರುತ್ತೇನೆ. ಸದರಿ ನಿವೇಶನ ಪೂರ್ವ-ಪಶ್ಚಿಮಃ 30 ಗಜ ಹಾಗೂ ಉತ್ತರ-ದಕ್ಷಿಣಃ 12 ಗಜ ಇರುತ್ತದೆ. ಸದರಿ ನಿವೇಶನ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ದಾರಿ, ಉತ್ತರ ಸ್ವಾಮಪ್ಪ ರವರ ಸ್ವತ್ತು, ದಕ್ಷಿಣಕ್ಕೆ ಮೈಲಪ್ಪ ರವರ ಸ್ವತ್ತು ಇರುತ್ತದೆ. ಸದರಿ ಚೆಕ್ಕುಬಂದಿಯ ನಡುವೆ ಇರುವ ನಿವೇಶನ ನನ್ನ ನಿವೇಶನ ಆಗಿರುತ್ತದೆ ಎಂದು ತೋರಿಸಲು ನಾನು ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯಪತ್ರ ಮತ್ತು ಋಣಭಾರ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಜಾಗದಲ್ಲಿ ಇರುವ ಮನೆ ನನ್ನ ಮಗಳಾದ ಮಾರಕ್ಕ ರವರಿಗೆ ನೀಡಿರುತ್ತೇನೆ. ಸದರಿ ವಿಚಾರವನ್ನು ನಾನು ನನ್ನ ವಾದಪತ್ರದಲ್ಲಿ ಹೇಳಿರುತ್ತೇನೆ. ಸದರಿ ನಿವೇಶನದ ಪಶ್ಚಿಮ ದಿಕ್ಕಿಗೆ ಸದರಿ ಮನೆ ಬರುತ್ತದೆ. ನನಗೆ ಸೇರಿದ ಜಾಗದಲ್ಲಿ ನಾನು ಯಾವುದೇ ಮನೆಯನ್ನು ಕಟ್ಟಿರುವುದಿಲ್ಲ, ಅದನ್ನು ಖಾಲಿಯಾಗೇ ಬಿಟ್ಟಿರುತ್ತೇನೆ. ನಾನು ಸದರಿ ನಿವೇಶನದಲ್ಲಿ ಯಾವುದೇ ಮನೆಯನ್ನು ಕಟ್ಟಿರುವುದಿಲ್ಲ, ನಾನು

ಬೇರೆ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತೇನೆ. ನಾನು ನನ್ನ ಮಗಳಾದ ಮಾರಕ್ಕ ರವರಿಗೆ ನೀಡಿರುವ ಜಾಗಕ್ಕೆ ದಾರಿ ಇರುತ್ತದೆ, ಆದರೆ ನಾನು ಉಳಿಸಿಕೊಂಡ ಖಾಲಿ ಜಾಗಕ್ಕೆ ಯಾವುದೇ ದಾರಿ ಇರುವುದಿಲ್ಲ. ನನಗೆ ಸೇರಿದ ಖಾಲಿ ಜಾಗದ ಪೂರ್ವ ದಿಕ್ಕಿನ ಕಡೆ 5 ನೇ ಪ್ರತಿವಾದಿಯ ಮನೆ ಇದೆ ಎಂದರೆ ಸರಿಯಲ್ಲ. ನನ್ನ ಜಾಗದ ಪೂರ್ವ ದಿಕ್ಕಿನ ಕಡೆ 1 ಮತ್ತು 5 ನೇ ಪ್ರತಿವಾದಿಗಳ ಮನೆ ಇರುತ್ತದೆ, ಅದು ನಾನು ಓಡಾಡುವ ದಾರಿಯಲ್ಲೇ ಬರುತ್ತದೆ. 5 ನೇ ಪ್ರತಿವಾದಿಯ ಮನೆಯ ಉತ್ತರ ದಿಕ್ಕಿನ ಕಡೆ 1 ನೇ ಪ್ರತಿವಾದಿಯ ಜಾಗ ಇದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು 1 ಮತ್ತು 5 ನೇ ಪ್ರತಿವಾದಿಗಳ ಮನೆಯ ನಡುವೆ ದಾರಿ ಇದೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ಪಶ್ಚಿಮ ದಿಕ್ಕಿನ ಕಡೆ ಬಂಡೆ ಇದೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಅದನ್ನು ನಮಗೆ ಇರುವ ದಾರಿಗೆ ಅಡ್ಡವಾಗಿ ಇಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ಸದರಿ ಬಂಡೆಯನ್ನು ಇತ್ತೀಚಿನ ದಿನಗಳಲ್ಲಿ ಇಟ್ಟಿರುವುದಿಲ್ಲ ಅದನ್ನು ಸುಮಾರು 5 ವರ್ಷಗಳ ಹಿಂದೆಯೇ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಸದರಿ ಬಂಡೆಯನ್ನು 1 ವರ್ಷದ ಹಿಂದೆ ಗಲಾಟೆ ಆದಾಗ ಇಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಸದರಿ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿ ಮಾಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ತಾಲ್ಲೂಕು ಕಛೇರಿಯಲ್ಲಿ ನನ್ನ ಮಗಳಿಗೆ ದಾಖಲಾತಿ ಮಾಡಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಮಾರಕ್ಕ ರವರ ಮನೆಗೆ ಉತ್ತರ ದಿಕ್ಕಿನ ಕಡೆ ಬಾಗಿಲು ಇರುತ್ತದೆ. ಸದರಿ ಮನೆಯ ಉತ್ತರ ಮತ್ತು ಪೂರ್ವ ದಿಕ್ಕಿನ ಕಡೆಯೂ ಖಾಲಿ ಜಾಗ ಬಿಟ್ಟಿರಲಾಗಿರುತ್ತದೆ. 5 ನೇ ಪ್ರತಿವಾದಿಯ ಮನೆಯ ಬಾಗಿಲು ಪೂರ್ವ ದಿಕ್ಕಿನ ಕಡೆ ಬರುತ್ತದೆ

ಎಂದರೆ ಸರಿ. 1 ನೇ ಪ್ರತಿವಾದಿ ತಮ್ಮ ಜಾಗದಲ್ಲಿ ಬಾತ್ ರೂಂ ಮತ್ತು ಶೆಡ್ ಅನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಗಲಾಟೆಯಾದ ನಂತರ 1 ನೇ ಪ್ರತಿವಾದಿ ಕಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ಸದರಿ ಬಾತ್ ರೂಂ ಮತ್ತು ಶೆಡ್ ಅನ್ನು ಬಹಳ ಪೂರ್ವದಲ್ಲೇ ಕಟ್ಟಿದ್ದರೂ ಸಹಾ ಇತ್ತೀಚಿನ ದಿನದಲ್ಲಿ ಕಟ್ಟಿರುತ್ತಾರೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಹಾಗೂ ಪ್ರತಿವಾದಿಗಳ ಜಾಗದ ನಡುವೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹಾಗೂ ಪ್ರತಿವಾದಿಗಳ ಜಾಗದ ನಡುವೆ ದಾರಿ ಇದೆ ಎಂದು ತೋರಿಸಲು ನಾನು ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ನನ್ನ ಹಾಗೂ ಪ್ರತಿವಾದಿಗಳ ಜಾಗದ ನಡುವೆ ಯಾವುದೇ ದಾರಿ ಇಲ್ಲದೇ ಇದ್ದರೂ ಸಹಾ ನನ್ನ ಕ್ರಯಪತ್ರದಲ್ಲಿ ದಾರಿ ಇರುವುದಾಗಿ ಸುಳ್ಳಾಗಿ ನಮೂದಿಸಿದ್ದು ಪ್ರತಿವಾದಿಗಳ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಗಳ ಜಾಗದ ನಡುವೆ ದಾರಿ ಇದೆಯೋ ಇಲ್ಲವೋ ಎಂದು ವರದಿ ಸಲ್ಲಿಸಲು ಕೋರ್ಟ್ ಕಮೀಷನರ್ ಅನ್ನು ನೇಮಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1 ಮತ್ತು 5 ನೇ ಪ್ರತಿವಾದಿಗಳ ಮನೆ ಮತ್ತು ಬಂಡೆ ಇಟ್ಟಿರುವ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳಿಗೆ ಸೇರಿದ ಯಾವುದೇ ಜಾಗ ಇರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಹಾಜರಿದ್ದು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಮುಂದುವರಿದ ಪಾಟೀ ಸವಾಲಿಗೆ ಅನುಮತಿ ನೀಡಿ ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**